ಓ.ಎಸ್. ನಂ:79/2017

ಪಿ.ಡಬ್ಲ್ಯೂ -01

ದಿನಾಂಕ. 21.02.2022 ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಾದಿ ಪರ ಶ್ರೀ ಬಿ.ಟಿ.ಎಸ್. ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಸರ್ವೆ ನಂಬರ್ 38/ಪಿ13 ರ ಎರಡು ಗಣಕ ಯಂತ್ರ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.1 ಮತ್ತು 2 ಎಂದು, ಸರ್ವೆ ನಂಬರ್ 38/ಪಿ14 ರ ಎರಡು ಗಣಕ ಯಂತ್ರ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.3 ಮತ್ತು 4 ಎಂದು, ಸರ್ವೆ ನಂಬರ್ 38/ಪಿ15 ರ ಎರಡು ಗಣಕ ಯಂತ್ರ ಪಹಣಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.5 ಮತ್ತು 6 ಎಂದು, ಸರ್ವೆ ನಂಬರ್ 86 ರ ಎರಡು ಗಣಕ ಯಂತ್ರ ಪಹಣಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.7 ಎಂದು, ಎಂ.ಆರ್.ಹೆಚ್.12/2014-15 ರ ಮುಟೇಷನ್ ರಿಜಿಸ್ಟರ್ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.8 ಎಂದು, ದಿನಾಂಕ.15.05.1989 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.9 ಎಂದು, ದಿನಾಂಕ.11.09.2000 ರ ಕ್ರಯ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿದ ಪರಿಹಾರವನ್ನು ನೀಡಬೇಕಾಗಿ ಕೋರುತ್ತೇನೆ.

**ಪಾಟೀ ಸವಾಲು : 1 ನೇ ಪ್ರತಿವಾದಿ ಪರ ಶ್ರೀ ಜಿ.ಎಸ್. ವಕೀಲರಿಂದ**

(ಪಾಟೀ ಸವಾಲಿಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು ಆಲಿಸಿ ಅನುಮತಿಸಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಚಳ್ಳಕೆರೆ.